**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಆಳಂದ.**

ಸಿ.ಸಿ.ನಂಃ 191/2019 ಸಿ.ಡಬ್ಲ್ಯೂ –1 ಪಿ.ಡಬ್ಲ್ಯೂ -1

| | | |
|---|---|---|
| ಹೆಸರು | ಃ | ಗಿರಿಮಲ್ಲಪ್ಪ |
| ತಂದೆಃ ಗಂಡ | ಃ | ಚನ್ನಪ್ಪ |
| ವಯಸ್ಸು | ಃ | ೩೮ ವರ್ಷ |
| ಉದ್ಯೋಗ | : | ಕೂಲಿಕೆಲಸ |
| ವಾಸಸ್ಥಳ | ಃ | ಮಾಡಿಯಾಳ |

ದಿನಾಂಕಃ ೨೦.೦೮.೨೦೨೪

ಸತ್ಯ ಪ್ರತಿಜ್ಞೆಯ ಮೇರೆಗೆ

---

**ಮುಖ್ಯ ವಿಚಾರಣೆ ಮಾನ್ಯ ಸಸಅ ಅವರಿಂದ ಃ**

ಆರೋಪಿ ನಂ.1 ನನ್ನ ಅಳಿಯಂದಿರು, ಆರೋಪಿ ನಂ.3 ನನ್ನ ಹೆಂಡತಿ, ಆರೋಪಿ ನಂ.4 ಮತ್ತು 5 ನನ್ನ ಅತ್ತೆ, ಮಾವ ಆಗಬೆಕು. ಚಾಸಾ-6 ನನ್ನ ತಾಯಿ, ಚಾಸಾ-8 ನನ್ನ ತಮ್ಮ, ಚಾಸಾ-2 ರಿಂದ 5, 8, 9 ರವರ ಪರಿಚಯ ಇರುತ್ತದೆ.

ಆರೋಪಿ ನಂ.೩ ರವರ ಜೊತೆ ನನ್ನ ಮದುವೆ ಸುಮಾರು ೧೦ ವರ್ಷಗಳ ಹಿಂದೆ ಆಗಿರುತ್ತದೆ. ಆರೋಪಿ ನಂ.೧ ರವರ ಜೊತೆ ನನ್ನದು ಮೊದಲು ಜಗಳವಾಗಿತ್ತು. ಆ ಕಾರಣದಿಂದ ಆರೋಪಿ ನಂ.೩ ನನ್ನ ಮನೆ ಬಿಟ್ಟು ಹೋಗಿ ತನ್ನ ತಂದೆ ತಾಯಿಗಳ ಜೊತೆ ವಾಸವಿರುತ್ತಾರೆ. ಆರೋಪಿತರು ಮತ್ತು ನಮ್ಮ ಜೊತೆ ಒಂದಲ್ಲ ಒಂದು ಕಾರಣ ಜಗಳವಾಗುತ್ತಾ ಇತ್ತು. ದಿ.೧೧.೦೯.೨೦೨೮ ರಂದು ಸಾಯಂಕಾಲ ೫.೦೦ ಗಂಟೆ ಸುಮಾರಿಗೆ ನಾನು ನಮ್ಮ ಮನೆಯಿಂದ ಬಸ್ ನಿಲ್ದಾಣದ ಕಡೆ ತಿರುಗಾಡಲು ಹೋದಾಗ ಆರೋಪಿ ನಂ.೧ ರಿಂದ ೫ ರವರು ನನ್ನ ಜೊತೆ ಗುಂಪು ಕಟ್ಟಿಕೊಂಡು ಬಂದು ಜಗಳ ಮಾಡಿರುತ್ತಾರೆ. ಏ ಮಗನೇ ನಿನಗ ಬಹಳ ಸೊಕ್ಕು ಬಂದಿದೆ ಎಂದು ಹೇಳಿ ನನ್ನ ಎದೆಯ ಮೇಲಿ ಅಂಗಿ ಹಿಡಿದು ಎಳೆದಾಡಿ ಕೆಳಗೆ ಕೆಡವಿ ಕಾಲಿನಿಂದ ಒದ್ದರು. ಆರೋಪಿ ನಂ.೨ ಮನೆ ಒಳಗೆ ಹೋಗಿ ಮಚ್ಚನ್ನು ತೆಗೆದುಕೊಂಡು ಹೊಡೆಯಲು ಬಂದಾಗ ನಾನು ಕೈಯನ್ನು ಅಡ್ಡ ಹಿಡಿದಾಗ ನನ್ನ ಕೈ ಉಂಗುರ ಬೆರಳು ಕಟ್ ಆಗಿರುತ್ತದೆ. ಆಗ ನಾನು ಚೀರಾಡುವ ಶಬ್ಬವನ್ನು ಕೇಳಿ ಚಾಸಾ-೬ ರಿಂದ ೯ ರವರು ಓಡಿ ಬಂದರು, ಆಗ ಅವರು ಬರುವುದನ್ನು ನೋಡಿ ಆರೋಪಿತರು ಓಡಿ ಹೋಗಿರುತ್ತಾರೆ. ನಂತರ ನಾನು ನಿಂಬರ್ಗಾ ಆಸ್ಪತ್ರೆಗೆ ತೋರಿಸಲು ಹೋಗಿರುತ್ತೇನೆ. ಅಲ್ಲಿ ಎಂ.ಎಲ್.ಸಿ. ಆದ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಗುಲಬರ್ಗಾ ಜಯದೇವ ಆಸ್ಪತ್ರೆಗೆ ಹೋಗಿರುತ್ತೇನೆ. ನಿಂಬರ್ಗಾ ಆಸ್ಪತ್ರೆಯಲ್ಲಿ ನಾನು ಪೋಲಿಸರಿಗೆ ಫಿರ್ಯಾದಿಯನ್ನು ಸಲ್ಲಿಸಿರುತ್ತೇನೆ. ಸಾಕ್ಷಿ ಫಿರ್ಯಾದಿಯಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿರುವುದರಿಂದ, ಫಿರ್ಯಾದಿಯನ್ನು ನಿಪಿ-೧ ಎಂದು, ಸಹಿಯನ್ನು ನಿಪಿ-೧(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಮಚ್ಚನ್ನು ನೋಡಿ ಗುರುತಿಸಿದ್ದರಿಂದ ಅದನ್ನು ಮು.ಮಾ-೧ ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಆರೋಪಿತರ ಪರ ಶ್ರೀ ಬಿ.ಎ.ಡಿ. ವಕೀಲರಿಂದ</u>**

[ ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದರಿಂದ ನೀಡಲಾಯಿತು ]

ಓ.ಹೇ.ಕೇ.ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ.ಆಳಂದ